**ಕರ್ನಾಟಕ ಸರ್ಕಾರ**
**(ಸಿ.ಆರ್.ಪಿ.67)**

| |
|---|
| **ಹೇಳಿಕೆ ಹಾಳೆ** |
| **(ಆರ್.ಪಿ.ಸಂಖ್ಯೆ 57)** |
| **ನಮೂನೆ ಸಂಖ್ಯೆ 4** |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸ್ಪೆಷಲ್ ಕೇಸ್ ನಂಬರ್ : 28/2010**

**ಫ್ರಾಸಾ- 23 ಚಾಸಾ- 31**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ತುಳಸಿ |
| ತಂದೆಯ ಹೆಸರುಃ | : | ರಾಜು |
| ವಯಸ್ಸುಃ | : | 33 ವರ್ಷ |
| ಉದ್ಯೋಗಃ | : | ಕೆಇಬಿ ಯಲ್ಲಿ ಕೆಲಸ |
| ವಾಸ | : | ಸಕಲೇಶಪುರ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 28-04-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ಚಾಸಾ-1ರವರ ಪರಿಚಯ ಇದೆ. ನ್ಯಾಯಾಲಯದ ಮುಂದಿರುವ 1ನೇ ಆರೋಪಿತರು ಗೊತ್ತು. 2ನೇ ಆರೋಪಿ ನಾಸಿರ್ ಮತ್ತು 3ನೇ ಆರೋಪಿ ಷಹಜಹಾನ್ ರವರನ್ನು ನೋಡಿಲ್ಲ. ಅವರ ಪರಿಚಯವಿಲ್ಲ. 2010ರಲ್ಲಿ ನಾನು ಮತ್ತು ಜಮೀಲ ಎಂಬುವವರು 1ನೇ ಆರೋಪಿ ನಡೆಸುತ್ತಿದ್ದ ಮೆಡಿಕಲ್ ಶಾಪ್ ನಲ್ಲಿ ನಾನು ಕೆಲಸ ಮಾಡಿಕೊಂಡಿದ್ದೆನು. ಅಲ್ಲಿ ಸುಮಾರು 2 ವರ್ಷ ಕೆಲಸ ಮಾಡಿಕೊಂಡಿದ್ದೆನು. ನಾನು ಮತ್ತು ಜಮೀಲ ಅಲ್ಲಿ ಸೇಲ್ಸ್ ಗರ್ಲ್ ಆಗಿ ಕೆಲಸ ಮಾಡಿಕೊಂಡಿದ್ದೆನು. ಆ ಸಮಯದಲ್ಲಿ ನಾನು, 1ನೇ ಆರೋಪಿತರು ಹಾಗೂ ಜಮೀಲ ಇರುತ್ತಿದ್ದೆವು. 1ನೇ ಆರೋಪಿತರು ಔಷಧಿಯನ್ನು ಹಾಸನ, ದಾವಣಗೆರೆಯಿಂದ ಏಜೆನ್ಸಿಯವರಿಂದ ತರಿಸಿಕೊಳ್ಳುತ್ತಿದ್ದರು. ಆ ಏಜೆನ್ಸಿಯವರ ಹೆಸರು ಗೊತ್ತಿಲ್ಲ. ಅವರು ಯಾವ ಯಾವ ಔಷಧಿಗಳನ್ನು ತರಿಸಿಕೊಳ್ಳುತ್ತಿದ್ದರೆಂಬುದು ನನಗೆ ಗೊತ್ತಿಲ್ಲ. 1ನೇ ಆರೋಪಿ ಶಿವಮೊಗ್ಗ ರಾಜು ಏಜೆನ್ಸಿಯವರಿಂದ ಬ್ಯೂಪ್ರೆಜೆಸಿಕ್ ಇಂಜೆಕ್ಷನ್

ತರಿಸಿಕೊಳ್ಳುತ್ತಿದ್ದ ವಿಚಾರ ನನಗೆ ಗೊತ್ತಿಲ್ಲ. ಅದನ್ನು 1ನೇ ಆರೋಪಿಯು 2 ಮತ್ತು 3ನೇ ಆರೋಪಿತರಿಗೆ ಹೆಚ್ಚಿನ ಹಣ ಸಂಪಾದನೆಗೋಸ್ಕರ ಮಾರಾಟ ಮಾಡುತ್ತಿದ್ದ ವಿಚಾರ ಗೊತ್ತಿಲ್ಲ. 1ನೇ ಆರೋಪಿಯು ಚಾಸಾ-1ರವರ ಲೆಟರ್ ಹೆಡ್ ನಲ್ಲಿ ಆ ಇಂಜೆಕ್ಷನ್ ನ್ನು ತರಿಸಿಕೊಳ್ಳುತ್ತಿದ್ದ ವಿಚಾರ ಗೊತ್ತಿಲ್ಲ. ಈ ವಿಚಾರದಲ್ಲಿ ಪೊಲೀಸರು ನನ್ನ ಹೇಳಿಕೆ ಮಾಡಿಕೊಂಡಿರುತ್ತಾರೆ. ಪೊಲೀಸರು ನನ್ನಲ್ಲಿ 1ನೇ ಆರೋಪಿಯು ಬ್ಯೂಪ್ರಿಜೆಸಿಕ್ ಇಂಜೆಕ್ಷನ್ ನ್ನು ಮಾರಾಟ ಮಾಡುವ ವಿಚಾರ ಗೊತ್ತಾ ಎಂದು ಕೇಳಿದರು, ನಾನು ಗೊತ್ತಿಲ್ಲ ಎಂದು ಹೇಳಿರುತ್ತೇನೆ. 1ನೇ ಆರೋಪಿಯನ್ನು ಪೊಲೀಸರು ದಸ್ತಗಿರಿ ಮಾಡಿದ ವಿಚಾರ ನನಗೆ ಗೊತ್ತಿದೆ.

(ಈ ಹಂತದಲ್ಲಿ ಮಾನ್ಯ ವಿಶೇಷ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ದಾಖಲೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುವುದು ಕಂಡುಬರುತ್ತದೆ, ಆದ್ದರಿಂದ ಮಾನ್ಯ ವಿಶೇಷ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ)

**ಪಾಟೀಸವಾಲುಃ ಸರ್ಕಾರದ ಪರ ಮಾನ್ಯ ವಿಶೇಷ ಅಭಿಯೋಜಕರಿಂದಃ**

1ನೇ ಆರೋಪಿಯು ಮೊದಲು ರಜತ್ ಸ್ಟೋರ್ ಎನ್ನುವ ಮೆಡಿಕಲ್ ಸ್ಟೋರ್ ನಡೆಸುತ್ತಿದ್ದರು ಎಂದರೆ ಸರಿ ಈಗ ಸಾಯಿ ಸ್ಟೋರ್ ನಡೆಸುತ್ತಿದ್ದಾರೆ ಎಂದರೆ ಸರಿ. 2010ರಲ್ಲಿ ನಾನು 1ನೇ ಆರೋಪಿ ನಡೆಸುತ್ತಿದ್ದ ಎಸ್ ಎಸ್ ಮೆಡಿಕಲ್ಸ್ ನಲ್ಲಿ ಕೆಲಸ ಮಾಡಿಕೊಂಡಿದ್ದಾಗ 1ನೇ ಆರೋಪಿಯು ಶಿವಮೊಗ್ಗ ರಾಜು ಏಜೆನ್ಸಿಯವರಿಂದ ವಿ ಆರ್ ಎಲ್ ಟ್ರಾನ್ಸ್ ಪೋರ್ಟ್ ಮುಖಾಂತರ ಬ್ಯೂಪ್ರಿಜೆಸಿಕ್ ಎಂಬ ಇಂಜೆಕ್ಷನ್‌ನ್ನು ತರಿಸಿಕೊಳ್ಳುತಿದ್ದರು ಎನ್ನುವ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ. ಸದರಿ ಇಂಜೆಕ್ಷನ್ ನ್ನು ಅಕ್ರಮ ಹಣ ಸಂಪಾದನೆ ಮಾಡಾುವ ಉದ್ದೇಶದಿಂದ 1ನೇ ಆರೋಪಿತರು 2 ಮತ್ತು 3ನೇ ಆರೋಪಿತರಿಗೆ ಮಾರಾಟ ಮಾಡುತ್ತಿದ್ದರು ಎನ್ನುವ ವಿಚಾರ ಗೊತ್ತು ಎಂದರೆ ಸರಿಯಲ್ಲ. ನಾನು 1ನೇ ಆರೋಪಿತರ ಮೆಡಿಕಲ್ ಶಾಪ್ ನಲ್ಲಿ ಕೆಲಸ ಮಾಡಿಕೊಂಡಿದ್ದಾಗ 2 ಮತ್ತು 3ನೇ ಆರೋಪಿತರು ಆ ಇಂಜೆಕ್ಷನ್ ಕೊಳ್ಳುವ ಸಲುವಾಗಿ ಅಲ್ಲಿಗೆ ಬಂದು 1ನೇ ಆರೋಪಿತರ ಜೊತೆ ಮಾತನಾಡುತ್ತಿದ್ದ ವಿಚಾರ ಗೊತ್ತು

ಎಂದರೆ ಸರಿಯಲ್ಲ. 1ನೇ ಆರೋಪಿತರೇ ಆ ಇಂಜೆಕ್ಷನ್ ತರಿಸಿಕೊಳ್ಳಲು ಇಂಡೆಂಟ್ ತಯಾರಿಸುತ್ತಿದ್ದರುಎನ್ನುವ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ. ಆ ಇಂಡೆಂಟ್ ನ್ನು ಕವರ್ ನಲ್ಲಿಟ್ಟು ನಾನು ಮತ್ತು ಜಮೀಲ ಪ್ಯಾಕು ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ಸದರಿ ಇಂಡೆಂಟನ್ನು 1ನೇ ಆರೋಪಿ ಚಾಸಾ-1ರವರ ಲೆಟರ್ ಹೆಡ್ ನಂತೆ ಹೋಲುವ ಲೆಟರ್ ಹೆಡ್ ನಲ್ಲಿ ಸಿದ್ದಪಡಿಸುತ್ತಿದ್ದರು, ಈ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ. 2 ಮತ್ತು 3ನೇ ಆರೋಪಿತರು ಆ ಇಂಜೆಕ್ಷನ್ ತರಿಸಲು 1ನೇ ಆರೋಪಿತರೊಂದಿಗೆ ಮಾತನಾಡಿ ಆರ್ಡರ್ ಕೊಡುತ್ತಿದ್ದ ವಿಚಾರ ಹಾಗೂ ಚಾಸಾ-1ರವರ ಲೆಟರ್ ಹೆಡ್ ನಂತೆ ಹೋಲುವ ಲೆಟರ್ ಹೆಡ್ ನಲ್ಲಿ ಇಂಡೆಂಟ್ ಮಾಡುತ್ತಿದ್ದ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ. ಆ ವಿಚಾರವಾಗಿ 1ನೇ ಆರೋಪಿತರು ದಸ್ತಗಿರಿಯಾಗಿದ್ದರು, ಆ ಬಗ್ಗೆ ನಮ್ಮನ್ನು ವಿಚಾರ ಮಾಡಲು ಪೊಲೀಸರು ಬಂದಿದ್ದರು ಎಂದರೆ ಸಾಕ್ಷಿಯು ದಸ್ತಗಿರಿಯಾಗಿದ್ದು ನಿಜ ಎನ್ನುತ್ತಾರೆ. 1ನೇ ಆರೋಪಿಯು 2 ಮತ್ತು 3ನೇ ಆರೋಪಿತರ ಆರ್ಡರ್ ಮೇರೆಗೆ ಶಿವಮೊಗ್ಗದ ರಾಜು ಏಜೆನ್ಸಿಯವರಿಂದ ಬ್ಯೂಪ್ರಿಜೆಸಿಕ್ ಎಂಬ ಇಂಜೆಂಟ್ ಕೊಟ್ಟು ಅದನ್ನು ಅಕ್ರಮವಾಗಿ ಮಾರಾಟ ಮಾಡಿ ಹಣ ಸಂಪಾದನೆ ಮಾಡುತ್ತಿದ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. 1ನೇ ಆರೋಪಿ ನಾಸಿರ್ ಮತ್ತು ಷಹಜಹಾನ್ ರವರನ್ನು ಬಹಳಷ್ಟು ಬಾರಿ ಮೆಡಿಕಲ್ ಶಾಪ್ ಗೆ ಬಂದಿದ್ದಾಗ ಅವರಿಬ್ಬರನ್ನು ನಮಗೆ ಪರಿಚಯಿಸಿದ್ದರು ಎಂದರೆ ಸರಿಯಲ್ಲ. ಈ ವಿಚಾರವಾಗಿ ದಿನಾಂಕಃ 23-2-2010ರದು ಈಗ ನನಗೆ ಓದಿ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಸದರಿ ಹೇಳಿಕೆಯ ಭಾಗವನ್ನು ನಿಪಿ-33 ಎಂದು ಗುರುತಿಸಲಾಯಿತು. ಎಲ್ಲಾ ವಿಚಾರ ಗೊತ್ತಿದ್ದರೂ, 1ನೇ ಆರೋಪಿತರ ಬಳಿ ಕೆಲಸ ನಿರ್ವಹಿಸುತ್ತಿದ್ದರಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ 1ನೇ ಆರೋಪಿ ಪರ** ಶ್ರೀ ಎ ಹೆಚ್ ಬಿ **ವಕೀಲರಿಂದಃ**

ಇಲ್ಲವೆಂದು ಹೇಳುತ್ತಾರೆ.

**ಪಾಟೀಸವಾಲುಃ 2ನೇ ಆರೋಪಿತರ ಪರ ಶ್ರೀ ಜೆ ಎಸ್ ವಕೀಲರಿಂದಃ**

ಇಲ್ಲವೆಂದು ಹೇಳುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**